ಶ್ರೀ ಕೆ.ಎನ್. ಸುಬ್ಬಾರೆಡ್ಡಿ:–ಮಾನ್ಯ ಅಧ್ಯಕ್ಷರೆ, ನಾನೇಕೆ ಇಲ್ಲಿ ಇದನ್ನು ಹೇಳುತ್ತಿದ್ದೇನೆಂದರೆ, ಕೆಲವು 1997ನೇ ಇಸವಿಗೆ ಸಂಬಂಧಪಟ್ಟವು ಇವೆ. ಇದರ ಬಗ್ಗೆ ವಿವರಗಳೂ ಕೂಡ ಇದರಲ್ಲಿ ಇಲ್ಲ. ಇದರಲ್ಲಿ ಟ್ಯಾಕ್ಸ್ ಎಕ್ಸ್‌ಂಪ್‌ಷನ್ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ವಿವರಗಳೇ ಇಲ್ಲದೇ ಹಾಗೆಯೇ ಸುಮ್ಮನೇ ಅಪ್ರೂವಲ್ ಆಗಿರುವ ಹಾಗೆ ಇಟ್ಟರೆ ಹೇಗೆ?

ಅಧ್ಯಕ್ಷರು:–ಹಾಗೇನಿಲ್ಲ. ಇದರ ಬಗ್ಗೆ ಸಂಬಂಧಪಟ್ಟಂತೆ ಎಲ್ಲಾ ನೋಟಿಫಿಕೇಷನ್‌ಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿದ್ದಾರೆ.

SRI.K.N.SUBBAREDDY:- Let the chief Minister, who is also the Finance Minister, say what was the amount exempted....

SRI.D.B. CHANDRE GOWDA:- It is only placing on the table of the House. All other things, you will get the details in the gazette notification.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಇಲ್ಲೀನಾಗಿದೆಯೆಂದರೆ 1997-98, 1998-99ನೇ ಇಸವಿಗೆ ಸಂಬಂಧಪಟ್ಟದ್ದನ್ನೆಲ್ಲಾ ಅಪ್ರೂವಲ್‌ಗಾಗಿ ಇಟ್ಟಿದ್ದೀರಿ. But what are these papers. ನೀವು ಹೇಳಿರುವ ಐಟಂಗಳಲ್ಲಿ ಏನೇನು ಇದೆ ಎಂಬುದರ ಬಗ್ಗೆಯಾದರೂ ವಿವರಗಳು ಬೇಕಲ್ಲವೆ?

Mr.SPEAKER:- All those papers will be sent.

Sri.K.N.SUBBAREDDY:- We want the Finance Minister/Chief Minister to give details. Other wise, what is the exemption of amount, we will not be knowing.

ಅಧ್ಯಕ್ಷರು:– ಈಗ ಕೇವಲ ಈ ಸಭೆಯ ಮುಂದೆ ಕಾಗದ ಪತ್ರಗಳನ್ನು ಮಾತ್ರ ಇಡುವುದು. ಇದರ ಬಗ್ಗೆ ವಿವರಗಳೆಲ್ಲ ಗೆಜೆಟ್‌ನಲ್ಲಿ ಬರುತ್ತದೆ. ಗೆಜೆಟ್‌ನ್ನು ಓದುವುದು ನಿಮ್ಮ ಕರ್ತವ್ಯ. ಇನ್ನು ಮುಂದೆ ಗೆಜೆಟ್ ಹೊಸ ಸದಸ್ಯರಿಗೆ ಬರುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ರೂಲ್ಸ್ ಆಫ್ ಪ್ರೋಸೀಜರ್ ಪುಸ್ತಕವನ್ನು ನಾನು ಕಳುಹಿಸಿಕೊಡುತ್ತೇನೆ. ಅದನ್ನು ನೋಡಿದ ಮೇಲೆ ಅವರು ಹೇಳಲಿ.

SRI K.N.SUBBAREDDY:- I have seen that. But I want point of information as to what is the amount you have exempted.

Mr.SPEAKER:- We will send it.

ಶ್ರೀ ಎಸ್.ಎಂ.ಕೃಷ್ಣ:- ಮಾನ್ಯ ಅಧ್ಯಕ್ಷರೆ, ನಮ್ಮ ಮಂತ್ರಿಮಂಡಲದ ಗೌರವಾನ್ವಿತ ಸದಸ್ಯರುಗಳ ಪರಿಚಯವನ್ನು ನಾನು ಈ ಸದನಕ್ಕೆ ಮಾಡಿಕೊಡುವ ಸಲುವಾಗಿ ತಮ್ಮ ಅಪ್ಪಣೆಯನ್ನು ಪಡೆದಿರುವ ಹಿನ್ನೆಲೆಯಲ್ಲಿ ಈಗ ಅವರ ಪರಿಚಯವನ್ನು ಈ ಸದನಕ್ಕೆ ಮಾಡಿಕೊಡುತ್ತಿದ್ದೇನೆ.

ಅವರುಗಳಿಂದರೆ;

01. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ
02. ಶ್ರೀ ಹೆಚ್.ಕೆ. ಪಾಟೀಲ್
03. ಶ್ರೀ ಡಿ.ಬಿ. ಚಂದ್ರೇಗೌಡ
04. ಶ್ರೀ ಧರ್ಮಸಿಂಗ್
05. ಶ್ರೀ ಎಂ.ವೈ. ಘೋರ್ಪಡೆ
06. ಶ್ರೀ ಕೆ.ಹೆಚ್. ರಂಗನಾಥ್
07. ಶ್ರೀ ಆರ್.ವಿ. ದೇಶಪಾಂಡೆ
08. ಶ್ರೀ ಹೆಚ್.ಸಿ. ಶ್ರೀಕಂಠಯ್ಯ
09. ಶ್ರೀ ಕಾಗೋಡು ತಿಮ್ಮಪ್ಪ
10. ಶ್ರೀ ವಿ. ಮುನಿಯಪ್ಪ
11. ಶ್ರೀ ಸಿ.ಆರ್. ಸಗೀರ್ ಅಹಮದ್
12. ಶ್ರೀ ರಮಾನಾಥ್ ರೈ
13. ಡಾ:ಎ.ಬಿ. ಮಲಕರೆಡ್ಡಿ
14. ಶ್ರೀ ರೋಶನ್ ಬೇಗ್
15. ಶ್ರೀ ಬಿ.ಬಿ. ಚಿಮ್ಮನಕಟ್ಟಿ
16. ಶ್ರೀ ಎಂ.ಎಂ. ಹಿಂಡಸಗೇರಿ
17. ಶ್ರೀ ಹೆಚ್. ವಿಶ್ವನಾಥ್
18. ಶ್ರೀ ಡಿ.ಕೆ. ಶಿವಕುಮಾರ್
19. ಶ್ರೀಮತಿ ಮೋಟಮ್ಮ
20. ಶ್ರೀಮತಿ ಸುಮಾ ವಸಂತ್
21. ಶ್ರೀ ಖಮರುಲ್ ಇಸ್ಲಾಂ
22. ಶ್ರೀ ಟಿ.ಬಿ. ಜಯಚಂದ್ರ
23. ಶ್ರೀ ಡಿ.ಬಿ. ಇನಾಂದಾರ್

24. ಶ್ರೀ ಚವಾಣ್

25. ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್

26. ಶ್ರೀ ಎಂ. ಶಿವಣ್ಣ

27. ಶ್ರೀ ಕುಮಾರ್ ಬಂಗಾರಪ್ಪ

28. ಶ್ರೀ ಎಂ. ಮಲ್ಲಿಕಾರ್ಜುನ್ ನಾಗಪ್ಪ

29. ಶ್ರೀ ಎಂ.ಎಂ. ನಾಣಯ್ಯ

30. ಶ್ರೀ ಟಿ. ಜಾನ್

31. ಪ್ರೊ. ಬಿ.ಕೆ. ಚಂದ್ರಶೇಖರ್

ಈ ಎಲ್ಲಾ ಮಂತ್ರಿಮಂಡಲದ ಸದಸ್ಯರ ಪರಿಚಯವನ್ನು ಮಾಡಿಕೊಡಲು ಅನುವು ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ಧನ್ಯವಾದಗಳು.

6. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾ ನಿರ್ಣಯದ ಮಂಡನೆ

ಅಧ್ಯಕ್ಷರು:- ಈಗ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ.

ಶ್ರೀ ಎಸ್.ಜೆ. ನಂಜಯ್ಯನಮಠ್ (ಗುಳೇದಗುಡ್ಡ) :- ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾಪವನ್ನು ಈ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"ದಿನಾಂಕ 27-10-1999 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ"

ಶ್ರೀ ಯು.ಆರ್. ಸಭಾಪತಿ(ಉಡುಪಿ):- ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಅಧ್ಯಕ್ಷರು:- ನಾನು ಇನ್ನೊಂದು ವಿಷಯವನ್ನು ಈ ಸದನಕ್ಕೆ ತಿಳಿಸಬಯಸುತ್ತೇನೆ, ಈ ಮೊದಲ ಅಧಿವೇಶನಕ್ಕೆ ಸಂಬಂಧಪಟ್ಟಂತೆ ಮಾತ್ರ ಪ್ರತಿ ದಿನ ಮಧ್ಯಾಹ್ನ 1-30 ರಿಂದ 2-30 ರವರೆಗೆ ಭೋಜನ ವಿರಾಮವೆಂದು ನಿಗಧಿ ಮಾಡಲಾಗಿದೆ. ಈಗ ಮಾನ್ಯ ನಂಜಯ್ಯನವರ್‌ರವರೆ, ನೀವು ಮಾತನಾಡಿ.